ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೧-೧-೧೯೮೭ ರಿಂದ ೩೧-೧೨-೧೯೮೭ರವರೆಗೆ ಮೈಸೂರು ಜಿಲ್ಲೆಯಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ಹಾನಿ ಈ ಕೆಳಗಿನಂತಿದೆ.

೧)	ಬೆಳೆ ಹಾನಿ	೬೬೭	ಪ್ರಕರಣಗಳು
೨)	ಜಾನುವಾರು ಹಾನಿ	೧೫೭	—,,—
೩)	ಪ್ರಾಣಹಾನಿ	೫	—,,—
೪)	ಗಾಯಗೊಂಡವರು	೩	—,,—
	ಒಟ್ಟು	೮೩೨	—,,—

೧)	ಬೆಳೆ ಹಾನಿ	ರೂ. ೨,೦೨,೯೭—೦೦
೨)	ಜಾನುವಾರು ಹಾನಿ	ರೂ. ೩೪,೭೨೭—೦೦
೩)	ಪ್ರಾಣ ಹಾನಿ	ರೂ. ೨೫,೦೦೦—೦೦
೪)	ಗಾಯಗೊಂಡವರಿಗೆ	ರೂ. ೨,೦೦೦—೦೦
	ಒಟ್ಟು	ರೂ. ೨,೬೪,೭೦೬—೦೦

ಆ) ಬಂದಿರುವುದಿಲ್ಲ.

ಪ್ರಶ್ನೆ ಉದ್ಭವಿಸುವುದಿಲ್ಲ.

ಹರಪನಹಳ್ಳಿಯಲ್ಲಿ ವಿದ್ಯುದ್ದೀಕರಣ

(೨೩೯) ಬಿ. ಹೆಚ್. ಯಂಕನಾಯಕ್ (ಹರಪನಹಳ್ಳಿ).—ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ಎಷ್ಟು ಹಳ್ಳಿಗಳಿಗೆ ಹಾಗೂ ಲಂಬಾಣಿ ತಾಂಡಾಗಳಿಗೆ ಈವರೆವಿಗೂ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗಿದೆ ?

ಆ) ಇನ್ನೂ ವಿದ್ಯುದ್ದೀಕರಣವಾಗಬೇಕಾಗಿರುವ ಗ್ರಾಮ ಹಾಗೂ ತಾಂಡಾಗಳ ಒಟ್ಟು ಸಂಖ್ಯೆ ಎಷ್ಟು ?

ಇ) ಅವುಗಳಿಗೆ ಇನ್ನು ಎಷ್ಟು ದಿನಗಳಲ್ಲಿ ವಿದ್ಯುತ್ತನ್ನು ಒದಗಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ೩೧-೧೨-೧೯೮೭ರ ಒಳಗೆ ೭೨ ಗ್ರಾಮಗಳು ಮತ್ತು ೧೩ ಲಂಬಾಣಿ ತಾಂಡಾಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಆ) ಗ್ರಾಮಗಳು ಯಾವುವು ಇಲ್ಲ. ೩೧ ತಾಂಡಾಗಳಿಗೆ ವಿದ್ಯುತ್ ಒದಗಿಸಬೇಕಾಗಿದೆ.

ಇ) ೩೧-೩-೧೯೮೮ರ ಒಳಗಡೆ ೨೨ ತಾಂಡಾಗಳಿಗೆ ವಿದ್ಯುತ್ ಒದಗಿಸಲಾಗುತ್ತದೆ. ಉಳಿದ ತಾಂಡಾಗಳಿಗೆ ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಹಣದ ನೆರವು ದೊರೆತಂತೆ ವಿದ್ಯುದ್ದೀಕರಣ ಮಾಡಲಾಗುತ್ತದೆ.